ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳು ಮಂಜೂರು ಮಾಡಿದಲ್ಲಿ ನಿವೇಶನ ಹಂಚಿಕೆಯಾಗದೇ ಉಳಿದಿರುವ ಸದಸ್ಯರಿಗೆ ನಿವೇಶನಗಳನ್ನು ಒದಗಿಸಬಹುದಾಗಿದೆ.

ವಿಷಯ:- ಮಂಗಳೂರು ತಾಲ್ಲೂಕನ್ನು ಎರಡು ತಾಲ್ಲೂಕುಗಳಾಗಿ ವಿಂಗಡಿಸುವ ಕುರಿತು.

1447 (2265) **ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಅ) ರಾಜ್ಯದಲ್ಲಿರುವ ಅತಿ ದೊಡ್ಡ ಜಿಲ್ಲೆಗಳು ಮತ್ತು ಚಿಕ್ಕ ಜಿಲ್ಲೆಗಳು ಯಾವುವು? ಮತ್ತು ಅವುಗಳ ಗಾತ್ರ ಮತ್ತು ಜನಸಂಖ್ಯೆಗಳ ವಿವರ ನೀಡುವುದು?

ಆ) ಆಡಳಿತದ ದೃಷ್ಟಿಯಿಂದ ಜಿಲ್ಲೆಗಳ ಪುನರ್ ವಿಂಗಡನೆ ಮಾಡುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಇ) ದಕ್ಷಿಣ ಕನ್ನಡ ಜಿಲ್ಲೆ ದೊಡ್ಡ ಜಿಲ್ಲೆಯಾಗಿದ್ದು, ಇದರ ವಿಭಜನೆ ಮಾಡಿ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಾಗಿ ಪರಿವರ್ತಿಸಲಾಗುವುದೇ?

ಈ) ಯಾವಾಗ ವಿಭಜನೆಗೊಳಿಸಲಾಗುವುದು?

ಉ) ಮಂಗಳೂರು ತಾಲ್ಲೂಕನ್ನು ಎರಡು ತಾಲ್ಲೂಕುಗಳಾಗಿ ವಿಂಗಡಿಸಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 1. ಅತಿ ದೊಡ್ಡ ಜಿಲ್ಲೆ : ಬಿಜಾಪುರ.

2. ಅತಿ ಚಿಕ್ಕ ಜಿಲ್ಲೆ : ಬೆಂಗಳೂರು (ನಗರ) ಜಿಲ್ಲೆ.

ವಿಸ್ತೀರ್ಣ :

1. ಬಿಜಾಪುರ -- 17,100 ಚ. ಕಿ. ಮೀ.
2. ಬೆಂಗಳೂರು (ನ) – 2, 200 ಚ. ಕಿ. ಮೀ.

ಜನಸಂಖ್ಯೆ :

1. ಬಿಜಾಪುರ – 29,19,000
2. ಬೆಂಗಳೂರು (ನ) – 48,07,000

(1991 ರ ಜನಗಣತಿ ಪ್ರಕಾರ)

ಆ) ಜಿಲ್ಲೆ ಮತ್ತು ತಾಲ್ಲೂಕುಗಳ ಪುನರ್ ವಿಂಗಡನೆ ಬಗ್ಗೆ ರಚಿಸಲಾಗಿದ್ದ ಸಮಿತಿಗಳು ನೀಡಿರುವ ವರದಿಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಶ್ನೆ–(ಅ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.